ಧೋರಣೆಗಳನ್ನು ಮುಕ್ತ ಮನಸ್ಸಿನಿದ ನೋಡಲು ಅವರಿಗೆ ಸಾಧ್ಯವಾಗುತ್ತದೆ.

'ಅಂತಿಮವಾಗಿ ಸಾಹಿತ್ಯ ಕೃತಿಯೊಂದರ ಆಕೃತಿಯೇ ಎಲ್ಲ ಚಾರಿತ್ರಿಕ, ರಾಜಕೀಯ ಸ್ಥಿತಿಗಳ ಘನೀಕೃತ ರೂಪವಾಗಿರುತ್ತದೆ. ಆದ್ದರಿಂದ ಆಕೃತಿಯಲ್ಲಿ ತನ್ನೆಲ್ಲ ಗಾಢಸಿದ್ಧತೆಯೊಂದಿಗೆ ತೊಡಗಿಕೊಳ್ಳುವ ವಿಮರ್ಶಕ ಆಳದಲ್ಲಿ ಸಾಮಾಜಿಕ, ರಾಜಕೀಯ ವಿಮರ್ಶಕನೂ ಆಗಿರುತ್ತಾನೆ.'

ಈ ಮಾತನ್ನು ಉದ್ಧರಿಸುವ ಮುಗಳಿಯವರಿಗೆ ಬಹುಶಃ ಡಿ.ಆರ್. ಅವರ ಮತ್ತು ಮುಂದಿನ ಕನ್ನಡ ವಿಮರ್ಶೆಯ ದಾರಿಯ ಮುನ್ಸೂಚನೆ ಸಿಕ್ಕಿದ್ದಿರಬೇಕು ಅನ್ನಿಸುತ್ತದೆ. ಹೀಗೆ ಮೆಚ್ಚುತ್ತಿರುವಾಗಲೂ ಮುಗಳಿಯವರು ಮಹಾವಾಸ್ತವವಾದಿ ಕಾದಂಬರಿ ಎನ್ನುವ ಪರಿಕಲ್ಪನೆಯ ವ್ಯಾಖ್ಯಾನವೂ ಬೇಕಾಗಿತ್ತು ಎನ್ನುವ ಆಕ್ಷೇಪವೇ ಮೊದಲಾದ ಪ್ರಶ್ನೆಗಳನ್ನು ಎತ್ತುತ್ತಾ ಡಿ.ಆರ್. ವಿಮರ್ಶೆಯ ತೊಡಕುಗಳನ್ನೂ ಸ್ಪಷ್ಟಪಡಿಸುತ್ತಾರೆ. ಈ ಲೇಖನವು ತನಗೆ ಸಹಾಯಕವಾಯಿತು ಎಂದು ಡಿ.ಆರ್. ಹೇಳಿದ್ದು ಇಲ್ಲಿ ನೆನಪಾಗುತ್ತದೆ. ಅತ್ಯುತ್ಸಾಹದಲ್ಲಿ ತಾನು ಮಾಡಿದ ಕೆಲವು ಆತುರದ ಹೇಳಿಕೆಗಳನ್ನು ಇನ್ನೂ ವಿವರವಾಗಿ ಸಮರ್ಥಿಸಿಕೊಳ್ಳಬೇಕು ಎನ್ನುವುದು ಸ್ಪಷ್ಟವಾದಂತೆಯೇ, ತಾನು ನಡೆಯಬೇಕಾದ ಹಾದಿ ಸರಿಯಾಗಿದೆ ಎನ್ನುವುದು ಗೊತ್ತಾಯಿತು ಎಂದಿದ್ದರು ಅವರು.

ಡಿ.ಆರ್. ಅವರ ಮುಂದಿನ ಕೃತಿಗಳಾದ 'ಶಕ್ತಿಶಾರದೆಯ ಮೇಳ', 'ಸಾಹಿತ್ಯ ಕಥನ'ಗಳು ನಿಸ್ಸಂದೇಹವಾಗಿ ಸಾಹಿತ್ಯ ಪರಂಪರೆಯ ಮತ್ತು ಪರಂಪರೆಯ ಮರುವ್ಯಾಖ್ಯಾನದ ಬರಹಗಳಾಗಿದ್ದವು. ಮುಂದೆ ಅಕ್ಷರ ಪ್ರಕಾಶನದ 'ಅಕ್ಷರ ಚಿಂತನ ಮಾಲೆ'ಯಲ್ಲಿ ಅವರು ನಡೆಸಿದ ಮಹತ್ವಾಕಾಂಕ್ಷೆಯ ಪ್ರಯೋಗ ಮತ್ತು ಪ್ರಯತ್ನಗಳಿಗೆ ಈ ಎರಡರಲ್ಲಿಯೂ ತಯಾರಿ ಇದ್ದದ್ದನ್ನು ನಾವು ನೋಡಬಹುದು. ಇದನ್ನು ದೀರ್ಘವಾಗಿ ಅವಲೋಕಿಸಿದ ಜಿ.ಎಸ್. ಆಮೂರ, ಜಿ. ರಾಜಶೇಖರ, ಪೋಲಂಕಿ ರಾಮಮೂರ್ತಿಯವರ ಬರಹಗಳು, ಆ ಕೃತಿಗಳು ಎತ್ತಿದ ಪ್ರಶ್ನೆಗಳು ಮತ್ತು ತಲುಪಿದ ತೀರ್ಮಾನಗಳು ಕನ್ನಡದಲ್ಲಿ ಹೊಸ ತಾತ್ವಿಕತೆಯೊಂದನ್ನು ಕಟ್ಟಿದ ಬಗೆಯನ್ನು ಹೇಳುತ್ತಲೇ, ಅವುಗಳ ಬಗೆಗೆ ಉಳಿದ ಅಸಮಾಧಾನಗಳನ್ನೂ ದಾಖಲಿಸುತ್ತವೆ. ಸ್ಥಾಪಿತ ಶಕ್ತಿಗಳನ್ನು, ನಿಲುವುಗಳನ್ನು ಅಲ್ಲಾಡಿಸುವ ಪ್ರಯತ್ನವಾಗಿತ್ತು ಅದು. ಕನ್ನಡದ ಪ್ರಮುಖ ಲೇಖಕರನ್ನು ಕುವೆಂಪು, ಬೇಂದ್ರೆ, ಅಡಿಗ, ನರಸಿಂಹಸ್ವಾಮಿಯವರನ್ನು ಹೊಸ ಕನ್ನಡಿಯಲ್ಲಿ ತೋರಿಸುವ ಆ ಯತ್ನವು ಈ ತನಕದ ಸ್ಥಾನನಿರ್ದೇಶನಗಳನ್ನು ಬದಲಿಸುವಷ್ಟು ಶಕ್ತವಾಗಿತ್ತು. ಡಿ.ಆರ್. ಅವರ ಭಾಷೆ, ಶೈಲಿಯನ್ನು ಕುರಿತಂತೆ ಅವರ ಪರಮ ಅಭಿಮಾನಿಯೊಬ್ಬರು ನಿಮ್ಮ 'ಶಕ್ತಿಶಾರದೆಯ ಮೇಳ' ಓದುವುದೆಂದರೆ, ಸುಶ್ರಾವ್ಯವಾದ ಸಂಗೀತವನ್ನು ಕೇಳಿದ ಅನುಭವವನ್ನು ಕೊಡುತ್ತದೆ' ಎಂದಿದ್ದರು.

ಆದರೆ, ಇದಕ್ಕೆ ತದ್ವಿರುದ್ಧವಾದ ಅಭಿಪ್ರಾಯಗಳನ್ನು ಕನ್ನಡ ಸಾಹಿತ್ಯಲೋಕ ಅಷ್ಟೇ ಒರಟಾಗಿಕೊಡುತ್ತಿತ್ತು ಎನ್ನುವುದನ್ನು ಮರೆಯುವ ಅಗತ್ಯವಿಲ್ಲ. ಹಾ.ಮಾ. ನಾಯಕರು ಸಭೆಯೊಂದರಲ್ಲಿ (ಅಥವಾ ಲೇಖನವೊಂದರಲ್ಲಿ?) ಡಬ್ಬಕ್ಕೆ ಕಲ್ಲು ಹಾಕಿ ಅಲ್ಲಾಡಿಸಿದರೆ ಬರುವ ಶಬ್ದದಂತೆ ಡಿ.ಆರ್. ಅವರ ಬರವಣಿಗೆ ಎಂದಿದ್ದರು. ಆಗ ಅವರ ಪಿಎಚ್.ಡಿ. ವಿದ್ಯಾರ್ಥಿನಿಯಾಗಿದ್ದ ನಾನು ಆತಂಕಿತಳಾಗಿ, 'ಅಯ್ಯೋ ಸಾರ್, ಹೀಗೆ ಹೇಳಿದ್ದಾರಲ್ಲ' ಎಂದು ಉದ್ಗರಿಸಿದರೆ, ಅವರು ಅದಕ್ಕೆ ಯಾವ ಬೆಲೆಯನ್ನೂ ಕೊಡದೆ, 'ಇರ್ಲಿ ಬಿಡಿ, ಇವೆಲ್ಲಾ ಇದ್ದದ್ದೆ. ಅವರು ಯಾಕೆ ಹೀಗೆ ಹೇಳ್ತಿದಾರೆ ಅಂತ ಗೊತ್ತಾದ ಮೇಲೆ ಅದಕ್ಕೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ' ಎಂದಿದ್ದರು. ಈ ಪ್ರಸಂಗವನ್ನು ಇಲ್ಲಿ ಉಲ್ಲೇಖಿಸಿದ್ದು, ಅವರಿಗೆ ತಮ್ಮ ಬಗ್ಗೆ, ತಮ್ಮ ನಿಲುವುಗಳ ಬಗ್ಗೆ ಇದ್ದ ನಂಬಿಕೆಯನ್ನು ಸ್ಪಷ್ಟಪಡಿಸಲು.

ಮುಂದಿನ ಕೃತಿ ಬರುವ ಹೊತ್ತಿಗಾಗಲೇ ಡಿ.ಆರ್. ಅವರಿಗೆ ತಮ್ಮ ಭವಿಷ್ಯದ ದಾರಿ ನಿಚ್ಚಳವಾಗಿತ್ತು. ಕನ್ನಡ, ಕನ್ನಡ ಸಾಹಿತ್ಯ ಇವುಗಳ ತಳಹದಿಯಿಂದಲೇ ಅಖಿಲ ಭಾರತೀಯ ಭೂಮಿಕೆಯೊಂದನ್ನು ತಾನು ಕಟ್ಟಬೇಕು, ಕಟ್ಟಬಲ್ಲೆ ಎನ್ನುವ ಆತ್ಮವಿಶ್ವಾಸ ಬೆಳೆದಿತ್ತು. 'ಸಾಹಿತ್ಯ ಕಥನ' ಕೃತಿಯು ಸಾಹಿತ್ಯವನ್ನು